# ಸಂಭಾವಿತ ಖಳನಾಯಕ ರಾಘೋಬಾ ಭರಾರಿ



**ವಿಕಾಸ ಹೊಸಮನಿ**

ಕಲೆ: ವಿಶ್ವನಾಥ್ ಎ.ಎಸ್.

ಶಂಕರ ಮೊಕಾಶಿ ಪುಣೇಕರರ 'ಗಂಗವ್ವ ಗಂಗಾಮಾಯಿ' ಕಾದಂಬರಿ ಕನ್ನಡದ ಸಾರ್ವಕಾಲಿಕ ಶ್ರೇಷ್ಠ ಕೃತಿಗಳಲ್ಲೊಂದು. ಈ ಅಭಿಜಾತ ಕಾದಂಬರಿ ಪಾತ್ರ ಪ್ರಧಾನವಾದುದು. 'ಗಂಗವ್ವ ಗಂಗಾಮಾಯಿ'ಯಲ್ಲಿ ಬರುವ ಪಾತ್ರಗಳು ಎಷ್ಟು ಸಜೀವವಾಗಿ ಒಡಮೂಡಿವೆಯೆಂದರೆ ಕಾದಂಬರಿಯ ಹೊರಗೂ ಸಹ ಈ ಪಾತ್ರಗಳು ಜೀವಿಸುತ್ತಿವೆಯೆಂಬ ಭಾವನೆಯುಂಟು ಮಾಡುವಷ್ಟು ಪರಿಣಾಮಕಾರಿಯಾಗಿವೆ. ನಾನು ಮತ್ತೆ ಮತ್ತೆ ಓದಲು ಬಯಸುವ ಕ್ಲಾಸಿಕ್ ಕೃತಿಗಳಲ್ಲಿ ಇದೂ ಒಂದು.

ಬದುಕಿನ ಹಲವು ಸಂದರ್ಭಗಳಲ್ಲಿ 'ಗಂಗವ್ವ ಗಂಗಾಮಾಯಿ'ಯಲ್ಲಿ ರಾಘಪ್ಪ ಅಥವಾ ರಾಘೋಬಾ ಭರಾರಿಯನ್ನು ನನ್ನ ಮನಸ್ಸು ಮತ್ತೆ ಮತ್ತೆ ನೆನೆಯುತ್ತದೆ. ಬಿಂದಗೋಳ ರಾಘಪ್ಪನದು ದುಷ್ಟತನವೇ ಮೈವೆತ್ತಂತ ಖಳನಾಯಕನ ಪಾತ್ರವಾದರೂ ಸಹ, ಯಾಕೋ ಏನೋ, ನನಗೆ ರಾಘಪ್ಪನೆಂದರೆ ಸ್ವಲ್ಪ ಪ್ರಿಯವೇ. ಬಹುಶಃ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಪೂರ್ಣ ಪ್ರಮಾಣದ ಸಂಭಾವಿತ ಖಳನಾಯಕನನ್ನು 'ಗಂಗವ್ವ ಗಂಗಾಮಾಯಿ'ಯ ರಾಘಪ್ಪನ ಪಾತ್ರದ ಮೂಲಕ ಚಿತ್ರಿಸಿದ ಶ್ರೇಯಸ್ಸು ಶಂಕರ ಮೊಕಾಶಿ ಪುಣೇಕರರಿಗೆ ಸಲ್ಲುತ್ತದೆ.

ಬಿಂದಗೋಳ ರಾಘಪ್ಪನು ಎಂದಿನಿಂದಲೂ 'ರಾಘೋಬಾ ಭರಾರಿ' ಎಂಬ ಉಪನಾಮವನ್ನು ಪಡೆದಿದ್ದನು. ಆ ಉಪನಾಮದ ಬಗ್ಗೆ ಅವನಿಗೆ ಭಾಳಾ ಅಭಿಮಾನವೂ ಇದ್ದಿತು. ಅವನ ಕೀರ್ತಿ ಅನೇಕಮುಖವೆಂದರೆ ಸರಿಯೆನಿಸುತ್ತದೆ. ಹನ್ನೆರಡನೆಯ ವರ್ಷಕ್ಕೆ ಅಪ್ಪನ ಪಾಕೀಟನೊಳಗಿಂದ ಐದು ರೂಪಾಯಿಯನ್ನು ಚಪ್ಕ ಮಾಡಿ ತನ್ನ ಜೀವನದ ಒಂದು ಮಟ್ಟವನ್ನು ಮುಟ್ಟಿದ್ದನು.

ನಿಸರ್ಗದ ಖಾಸಾ ಮಗನಾದ ರಾಘಪ್ಪನಿಗೆ ಯಾತರದೂ ಕೊರತೆ ಇರಲಿಲ್ಲ. ಅವನು ಬಿಂದಗೋಳದಲ್ಲಿ ಇದ್ದ ಎಂಟು ವರ್ಷಗಳ ಅವಧಿಯಲ್ಲಿ ಆ ಗ್ರಾಮಕ್ಕೇ ಮುಂದಾಳು ಎನಿಸಿ ಮರೆದಿದ್ದ. ರೈತರು ಅವನಿಗೆ ಹೆದರಿ ಲಾವಣಿಯಲ್ಲಿ ಸೂಟು ಕೂಡ ಬೇಡುತ್ತಿರಲಿಲ್ಲ. ಬೇಡಿದರೆ ಅವರ ಅಣ್ಣತಮ್ಮಂದಿರಲ್ಲಿಯೇ ಜಗಳಾಟ ಹುಟ್ಟಿಸಬಲ್ಲವನೆಂದು ಅವನ ಖ್ಯಾತಿ ಇದ್ದಿತು.ಒಕ್ಕಲುತನ ಕೆಲವು ದಿನ ಮಾಡಿದರೆ, ಊರಿನ ದೊಡ್ಡ ರೈತರು ನೋಡಿ ನಾಚುವಂಥ ಎತ್ತುಗಳನ್ನು ಕಟ್ಟಿದ್ದನು. ಅದರಿಂದ ಉತ್ಪನ್ನವನ್ನೂ ಹಾಗೆಯೇ